ಮಹಾವೀರ ಕಾಸರ, ಶಿವಮೊಗ್ಗ
ನಾರದರ ನೆನಪಿನ ಸಾಮರ್ಥ್ಯ ಎಷ್ಟಿರಬಹುದು?



100 MB Ram; (100 ಮಹಾ ಭಾರತ, ರಾಮಾಯಣಗಳಿಗೆ ಆಗುವಷ್ಟು.)

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಇತ್ತೀಚೆಗೆ 'ಲಾಲಿಹಾಡು' ಕಣ್ಮರೆಯಾಗುತ್ತಿದೆಯಲ್ಲ?
ರೈಮ್ಸ್ ಎಂಬ 'ಖಾಲಿ' ಹಾಡುಗಳ ಆರ್ಭಟಕ್ಕೆ ಹೆದರಿ ಅವಿತುಕೊಂಡಿದೆಯಂತೆ.

ಜೀವಿ, ಗೊಂಡೇದಹಳ್ಳಿ
ಈ ಅಂಕಣದಲ್ಲಿ ಬಹಳಷ್ಟು ಪ್ರಶ್ನೆಗಳನ್ನು ಪುರುಷರು ಮಹಿಳೆಯರ ಬಗ್ಗೆಯೇ ಕೇಳಿರುತ್ತಾರಲ್ಲ?
ಸಹಜವೇ. ಹೆಣ್ಣು ಗಣಿತ, ವಿಜ್ಞಾನಗಳಂತೆ; ಎಷ್ಟೇ ಸ್ಟಡಿ ಮಾಡಿದರೂ ಅರ್ಥವಾಗಲ್ಲ.

ಮೈಸೂರು ಕುಸುಮ, ಶ್ರವಣಬೆಳಗೊಳ
ತುಂಬ ದಿನಗಳ ನಂತರ ಬರೆಯಲು ಪ್ರಾರಂಭಿಸಿದ್ದೇನೆ. ಏನಾದರೂ ಸಲಹೆ ಕೊಡುವಿರಾ?



ಅನ್ಯರಿಗೆ ಬರೆ, ಇರಿತ ಆಗದಂತೆ ಬರೆಯಿರಿ.

ಶಿರಾಲಿ ದೀಪಕ್ ಶೇಟ್, ಬೆಂಗಳೂರು
ಬದುಕಿದ್ದಾಗ ಸನ್ಮಾನ ಮಾಡದವರು ಹೆಣಕ್ಕೆ ಸನ್ಮಾನ ಮಾಡಲು ಕಾರಣ ಏನು?
'ಅವನ ಕೊನೇ ಆಸೆ ತೀರಿಸದೆ ಇದ್ದರೆ ದೆವ್ವ ಆಗ್ಬಿಟ್ಟಾನು' ಎಂಬ ಭಯ.

ಎಂ.ಸಿ. ಧನ್ಯತಾ, ಬೆಂಗಳೂರು
ವೃತ್ತಿಯಿಂದ ನಿವೃತ್ತನಾಗುವುದಕ್ಕೂ, ಪ್ರವೃತ್ತಿಯಿಂದ ನಿವೃತ್ತನಾಗುವುದಕ್ಕೂ ವ್ಯತ್ಯಾಸ?
ಅದು ವರ; ಇದು ಶಾಪ.

ಕೆ.ಎಸ್. ಸೋಮೇಶ್ವರ, ಬೆಂಗಳೂರು
ಸತಿಯನ್ನು ಪರಿಚಯಿಸುವಾಗ ಧರ್ಮಪತ್ನಿ ಎನ್ನುತ್ತಾರೆ. ಪತಿಯನ್ನೇಕೆ ಪತಿದೇವರೆನ್ನುವುದು?
ದೇವನಂತೆಯೇ ಆಗಾಗ್ಗೆ ಕಾಣೆ ಆಗುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜವಂಶಕ್ಕೂ, ರಾಜಕಾರಣಿಗಳ ವಂಶಕ್ಕೂ ಇರುವ ವ್ಯತ್ಯಾಸ?
ಅದು ಬಯಸಿದ್ದು ಪ್ರಜಾಪಾಲನೆ; ಇದು ಬಯಸುವುದು ಪ್ರಜೆಗಳ ಪಾಲನ್ನೆ.

ಬಾ.ರಂ. ಸುರೇಶ್, ಶಿವಮೊಗ್ಗ
ನೇರ, ದಿಟ್ಟ, ನಿರಂತರ; ಇದರ ಅರ್ಥವೇನು ಶಿವಾ?
ಸತಿ ಪಕ್ಕವಿದ್ದರೂ ರತಿಯನ್ನು ಹೀಗೆ ನೋಡಬೇಕೆಂಬ ಪತಿಯ ನೆರವೇರದ ಸುಪ್ತ ಆಶೆ.

ವಿ. ಹೇಮಂತಕುಮಾರ್, ಬೆಂಗಳೂರು
ಮದುವೆಯಾದ ಹೆಣ್ಣನ್ನು ಮುತ್ತೈದೆ ಅಂತಾರೆ. ಮದುವೆಯಾದ ಗಂಡನ್ನು?
'ಅವಳು ಏನಂದ್ರೂ ಅನ್ನಿಸ್ಕೋತಾನೆ' ಅಂತಾರೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಚಲನಚಿತ್ರಗಳಿಂದ ಬದಲಾವಣೆ ಸಾಧ್ಯವೆ?
ಸಾಧ್ಯ. ಇಂದಿನ ಚಿತ್ರಗಳನ್ನು ನೋಡಿದ ಹಲವರು ಸೋಷಿಯಲ್ ಮೀಡಿಯಾಗೆ ಬದಲಾಗಿದ್ದಾರೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಈ ಜಗತ್ತಿನಲ್ಲಿ ಸಾಲ ತೀರಿಸಲಾಗದ ಬ್ಯಾಂಕ್ ಯಾವುದು?
ಪಡೆದವನು ನೀಡಿದವನಿಗೆ ಹಿಂತಿರುಗಿಸಲು ಸಾಧ್ಯವೇ ಇಲ್ಲದ ನೇತ್ರಬ್ಯಾಂಕ್.

ಬಿ.ಆರ್. ಉಷಾ, ಬೆಂಗಳೂರು
ಪ್ರಶ್ನೆ ಕೇಳಿ ಕೇಳಿ ನಮಗೆ ಸುಸ್ತಾಯ್ತು. ಉತ್ತರ ಹೇಳಿ ಹೇಳಿ ನಿಮಗೆ?
ಹೆಸರಾಯ್ತು!

ಎಸ್ಸೆನ್ ಮಹಾಬಲರಾವ್, ಎಣ್ಣಾರ್ಪುರ
ಬರೆ ಕೊಟ್ಟು ಮುಲಾಮು ಹಚ್ಚಿದಳು?
ಎಮ್ಮೆಯಂತೆ ಬಿದ್ದಿದ್ದಿರಿ, ಬರೆ ಕೊಟ್ಟಳು; ಎತ್ತಿನಂತೆ ದುಡಿಯುವೆನೆಂದಿರಿ, ಮುಲಾಮು ಹಚ್ಚಿದಳು.

## ಬಹುಮಾನಿತ ಪ್ರಶ್ನೆ

ವಿ. ಮಾಧವ ಶಾನುಭಾಗ, ಕುಂದಾಪುರ
ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟ ದೇವರೆನ್ನುತ್ತಾರೆ. ಆದರೆ ದೇವರು ಕೊಟ್ಟದ್ದು ಎರಡು ಕಣ್ಣಲ್ಲವೆ?
ಒಂದು ಹೆಣ್ಣೇ ತವರು ಮತ್ತು ಅತ್ತೆಮನೆ ಎರಡಕ್ಕೂ ಕಣ್ಣಾದ್ದರಿಂದ ಎರಡು ಕಣ್ಣಿಗೆ ಸಮ.

ಪಿ. ಗೋವಿಂದರಾಜ್, ಶಿವಮೊಗ್ಗ
ಮಾತು ಬೆಳ್ಳಿ; ಮೌನ ಬಂಗಾರ. ಕಣ್ಣೀರು?
ಬೆಳ್ಳಿ, ಬಂಗಾರಗಳ ಶುದ್ಧತೆಯನ್ನು ಅಳೆಯುವ ಒರೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಇತ್ತೀಚಿನ ಮದುವೆ ಸಮಾರಂಭಗಳಲ್ಲಿ ಮದುಮಗಳು ಯಾರೆಂದು ಕಂಡುಹಿಡಿಯುವುದೇ ಕಷ್ಟವಾಗಿದೆಯಲ್ಲ?
ಅದು ಸುಲಭ. ಫ್ಲವರ್ ಡೆಕೋರೇಷನ್ನಿಗೆ ಮ್ಯಾಚ್ ಆಗುವ ಬಟ್ಟೆ ತೊಟ್ಟಿರುವವಳೇ ಮದುಮಗಳು.

ಆರ್.ಕೆ. ಹಾದಿಮನಿ, ಧಾರವಾಡ
ಪಾಕಿಸ್ತಾನದ ಮಾಜಿ ಪ್ರಧಾನಿ 33 ಕಡೆ ಚುನಾವಣೆಗೆ ನಿಲ್ಲುವುದು. ಹೇಗೆ ಸಾಧ್ಯ?



ಒಂದೇ ಕಡೆ ಹೆಚ್ಚು ಹೊತ್ತು ನಿಂತರೆ ಗುಂಡು ಬೀಳುವ ಭಯವಿದೆಯಂತಲ್ಲ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಅಂದು ಕುಟುಂಬದಲ್ಲಿ ಮಕ್ಕಳೇ ಆಸ್ತಿ; ಇಂದು ಮಕ್ಕಳಿಗಾಗಿ ಆಸ್ತಿ. ಮುಂದೆ?
ಬೆಕ್ಕು, ನಾಯಿಗಳೇ ಮಕ್ಕಳು. ವೃದ್ಧಾಶ್ರಮಕ್ಕಾಗಿ ಆಸ್ತಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಂಸಾರವೆಂದರೆ ಬರೀ ಕಷ್ಟ ಎನ್ನುವರಲ್ಲ, ನಿಜವೆ ಸರ್?
**Bury** ಕಷ್ಟ ಎನ್ನುವತ್ತ ಸಾಗುವುದೇ ಸಂಸಾರದ ಗುರಿ.

■ **ರಾಮ್**